ಸಿಲ್ವೆಸ್ಟರ ಮತ್ತು ಯಕ್ಷಿಣಿ ಹರಳು

ವಿಲಿಯಮ ಸ್ಟಿಗ,

ಕನ್ನಡಕ್ಕೆಃ
ಪ್ರಭಾಕರ ನಾನಾವಟಿ

ಸಿಲ್ವೆಸ್ಟರ ಅಕಾರ್ನ ಮಾರ್ಗದಲ್ಲಿದ್ದ ಮನೆಯಲ್ಲಿ ತಂದೆ ತಾಯಿಯ ಜತೆ ಇರುತ್ತಿದ್ದನು. ಅವನಿಗೆ ಬಣ್ಣ ಬಣ್ಣದ ಹಾಗು ಬೇರೆ ಬೇರೆ ಆಕಾರದ ಚಿಕ್ಕ ಪುಟ್ಟ ಹರಳುಗಳನ್ನು ಸಂಗ್ರಹಿಸಿಡುವ ಹವ್ಯಾಸವಿತ್ತು.

ಮಳೆಗಾಲದ ಒಂದು ಶನಿವಾರದ ದಿನ ಅವನಿಗೆ ಒಂದು ಕೆಂಪು ಬಣ್ಣದ ಕಣ್ಣುಕುಕ್ಕಿಸುವಷ್ಟು ಬೆಳಗುವ ಹಾಗು ದುಂಡಗಿನ ಗೋಲಿ ಆಕಾರದ ಹರಳು ಸಿಕ್ಕಿತು. ಅದನ್ನು ದಿಟ್ಟಿಸಿ ನೋಡಿದಾಗ ಚಳಿಬಂದಂತೆ ಮೈ *ನಡುಗತೊಡಗಿತು.ಹರಳು ನೋಡಿ ಅಚ್ಚರಿಯಾಗಿರಬಹುದು ಇಲ್ಲವೆ ತಂಪಾದ ಮಳೆ ಹನಿ ಮೈ ಮೇಲೆ ಬಿದ್ದಿರಬಹುದು* ಎಂದು ಅವನಿಗೆ ಅನ್ನಿಸಿತು. *ಈಗ ಮಳೆ ನಿಂತರೆ ಎಷ್ಟೊಂದು ಮೋಜು ಉಂಟಾಗುವದು* ಎಂದು ಮನಸ್ಸಿನಲ್ಲಿ ಎಣಿಕೆ ಹಾಕಿದನು.

ನೋಡುನೋಡುವಷ್ಟರಲ್ಲಿ ಮಳೆ ನಿಂತು ಬಿಟ್ಟಿತು. ನಿತ್ಯದಂತೆ ಮೆಲ್ಲಮೆಲ್ಲನೆ ನಿಲ್ಲದೆ ಒಮ್ಮೆಲೆ ನಿಂತಿತು. ಹನಿಗಳು ಕಾಣದಾದವು. ಮೋಡಗಳು ಅಳಿಸಿ ಹೋದವು.

ಸೂರ್ಯನು ಹೊಳೆಯತೊಡಗಿದನು. ಮಳೆ ಬೀಳಲೆ ಇಲ್ಲ.

ಎಂದೆನಿಸುವಂತೆ ಆ ದೃಶ್ಯವಿತ್ತು.



ಚಿಕ್ಕಂದಿನಿಂದಲೂ ನೆನಪು ಮಾಡಿದರೆ ನನ್ನ ಕೋರಿಕೆ ಎಂದೂ ಮನಗೂಡಿರಲಾರದು ಹಾಗು ಏನೋ ಮಾಟವಾಗಿರಬಹುದು. ಎಂದು ಅವನಿಗೆ ಅನ್ನಿಸತೊಡಗಿತು. ಈ ಮಾಟ ಹರಳಿನಿಂದಲೇ ಬಂದಿದೆ ಎಂದು ಖಚಿತವಾಯಿತು. (ನಿಜವಾಗಿ ಹಾಗೆ ನಡೆದಿತ್ತು.) ಇದರ ಪರೀಕ್ಷೆ ಮಾಡಲೆಂದು ಹರಳನ್ನು ನೆಲದ ಮೇಲಿಟ್ಟು *ಮತ್ತೆ ಮಳೆ ಬೀಳಲಿ* ಎಂದು ಕೋರಿದನು. ಏನೂ ಆಗಲಿಲ್ಲ. ಅಂಗೈಯಲ್ಲಿ ಹರಳನ್ನು ಹಿಡಿದು ಮಳೆ ಬೀಳಲೆಂದು ಬಯಸಿದಾಗ ಮುಗಿಲು ಕಾರ್ಮೋಡಗಳಿಂದ ತುಂಬಿತು. ಮಿಂಚು ಮಿನುಗಿತು. ಮೋಡಗಳ ಗುಡುಗಿನ ದನಿ ಕೇಳಿಸತೊಡಗಿತು. ರಭಸದಿಂದ ಮಳೆ ಬೀಳತೊಡಗಿತು.

ಇಂದಿನ ದಿನ ಭಾಗ್ಯದ ದಿನ.
ಇಂದಿನಿಂದ ನಾನು ಏನು ಬೇಕಾದರೂ
ಇಚ್ಛಿಸಬಹುದು.ನನ್ನ ತಾಯಿ-ತಂದೆಯರ
ಬಯಕೆಯನ್ನು ಈಡೇರಿಸಬಹುದು.
ನೆಂಟರ ಹಾಗು ಗೆಳೆಯರ
ಆಸೆ ಪೂರ್ತಿಗೊಳಿಸಬಹುದು.
ಅವನು ಮನಸ್ಸಿನಲ್ಲಿ ಮಂಡಿಗೆ
ಹಾಕತೊಡಗಿದನು.

ಅವನು ಮತ್ತೆ *ಬಿಸಿಲು ಬೀಳಲಿ* ಎಂದು
ಕೋರಿದನು. ಬಿಸಿಲು ಬಿದ್ದಿತು. *ನನ್ನ*
ಬೆನ್ನಿನ ಮೇಲಿನ ನರವಲಿ
ಮಾಯವಾಗಲಿ ಎಂದು ಕೂಡ
ಕೋರಿದನು. ಅದು ಮಾಯವಾಯಿತು.
ಅವನು ಮನೆಗೆ ಹೋಗತೊಡಗಿದನು.
ಮನೆಯಲ್ಲಿ ಈ ಯಕ್ಷಿಣಿ ಹರಳನ್ನು
ತಾಯಿ-ತಂದೆಗೆ ತೋರಿಸಿ ಅವರನ್ನು
ಅಚ್ಚರಿಪಡಿಸಬೇಕೆಂದು ಹವಣಿಸಿದನು.
ಅವರ ಅರಳಿದ ಮುಖವನ್ನು ಅವನಿಗೆ
ನೋಡಬೇಕಾಗಿತ್ತು. ನಿಜವಾಗಿ
ನೋಡಿದರೆ ಅವನಿಗೆ ಇದರ ಮೇಲೆ
ನಂಬಿಕೆ ಇರಲಿಲ್ಲ.

ಸ್ವಾಬೆರಿ ಗುಡ್ಡದ ಹತ್ತಿರದಿಂದ ಹೋಗುವಾಗ *ನನಗೆ ಏನೇನು ಬೇಕು* ಎಂಬುದರ ಎಣಿಕೆ ಹಾಕುತ್ತಿದ್ದನು. ಅಷ್ಟರಲ್ಲಿ ಅವನ ಗಮನ ಎದುರಿಗೆ ಹೋಯಿತು. ಅಲ್ಲಿ ಒಂದು ಕ್ರೂರ ಮುಖದ, ಹಸಿದಿದ್ದ ಸಿಂಹ ಇವನನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಿತ್ತು. ಈತ ಅಂಜಿದನು. ಅದರ ಅಂಜಿಕೆ ಇರದಿದ್ದರೆ ಈ ಮಾಟದ ಹರಳಿನಿಂದ ಸಿಂಹನನ್ನೇ ಮಾಯ ಮಾಡಬಹುದಾಗಿತ್ತು. *ಇಲ್ಲವೇ ನಾನೇ ಮಾಯವಾಗಿ ತಾಯಿಯ ತೊಡೆಯ ಮೇಲೆ ಮಲಗಬಹುದಾಗಿತ್ತು.*

ಇಲ್ಲದಿದ್ದರೆ ಆ ಸಿಂಹನನ್ನು ಚಿಟ್ಟೆ ಇಲ್ಲವೆ ಹೂ ಇಲ್ಲವೆ ಆಡು ಮಾಡಬಹುದಿತ್ತು. *ನಾನೀಗ ಬಂಡೆಗಲ್ಲಾಗಬೇಕು* ಎಂದೊಡನೆ ಆತ ಕಲ್ಲಾದನು. ಅಷ್ಟರಲ್ಲಿ ಸಿಂಹ ಅವನ ಮೇಲೆ ನೆಗೆಯಿತು. ಆದರೆ ಅದು ಗೊಂದಲಕ್ಕೆ ಬಿತ್ತು. ಆ ಬಂಡೆಗಲ್ಲಿಗೆ ಎಷ್ಟು ಸುತ್ತು ಹಾಕಿದರೂ ವಾಸನೆ ನೋಡಿದರೂ ಆದಕ್ಕೆ ಅದರ ಬೇಟೆ ಸಿಗಲಿಲ್ಲ. *ಆ ಕತ್ತೆಯನ್ನು ನಾನು ನೋಡಿದ್ದೆ!* ಎಂದು ಒಟಗುಡುತ್ತ ಮರಳಿ ಹೋಯಿತು.





ಸಿಲ್ವೆಸ್ಟರ ಬಂಡೆಗಲ್ಲಾಗಿ ಸ್ಯಾಬೆರಿ ಗುಡ್ಡದ ಮೇಲೆ ತೆಪ್ಪಗೆ ಬಿದ್ದಿದ್ದನು. ಮಗ್ಗುಲಲ್ಲಿ ನೆಲದ ಮೇಲೆ ಆ ಯಕ್ಷಿಣಿ ಹರಳು ಹೊಳೆಯುತ್ತಿತ್ತು. ಆದರೆ ಅದನ್ನು ಕೈಯಲ್ಲಿ ಹಿಡಿಯಲು ಶಕ್ಯವಿರಲಿಲ್ಲ. *ನಾನೀಗ ಮೊದಲಿನಂತಾಗಬೇಕು* ಎಂದೆನ್ನಿಸುತ್ತಿತ್ತು. ಆದರೆ ಏನೂ ಬದಲಾಗುತ್ತಿರಲಿಲ್ಲ. ಹರಳನ್ನು ಕೈಯಲ್ಲಿ ಹಿಡಿದಾಗಲೇ ಅದರ ಮೋಡಿ ಕೆಲಸ ಮಾಡುತ್ತಿತ್ತು. ಈಗ ಎನೂ ಮಾಡುವಹಾಗಿರಲಿಲ್ಲ. ಹುಚ್ಚು ಹಿಡಿದಂತೆ ಅವನ ಸ್ಥಿತಿಯಾಗಿತ್ತು. ಅವನು ಬಹಳ ಅಂಜಿದ್ದನು. ಅವನಿಗೆ ಚಿಂತೆಯುಂಟಾಗಿತ್ತು. ಅವನು ದಿಕ್ಕುಗೆಟ್ಟಿದ್ದನು.

ಅವನ ತಲೆಯಲ್ಲಿ ನೂರಾರು ವಿಚಾರಗಳು ಬರತೊಡಗಿದವು. *ಯಾರಾದರೂ ಬಂದು ಈ ಹರಳನ್ನು ಅಂಗೈಯಲ್ಲಿ ಹಿಡಿದು ನನ್ನನ್ನು ಮೊದಲಿನ ಸ್ವರೂಪದಲ್ಲಿ ಬರಬೇಕೆಂದು ಕೋರಬೇಕು.* ಆದರೆ ಅದು ಸಾಧ್ಯವಿಲ್ಲ ಎಂದು ಅವನು ಮನಗಂಡನು. *ಮುಖ್ಯವಾಗಿ ಈ ಬಂಡೆಗಲ್ಲು ಹಾಗು ನನ್ನ ಸಂಬಂಧವೇನು ಎಂದು ಕೇಳಿ ಇಂತಹ ವಿಚಾರವನ್ನೇ ಅವರು ಮಾಡಲಿಕ್ಕೆ ಲ್ಲ. ಇಂತಹ ವಿಚಾರ ಸಾವಿರಕ್ಕೆ ಒಬ್ಬ ಮಾಡಬಹುದು.ಸಿಲ್ವೆಸ್ಟರನಿಗೆ* ನಿದ್ರೆ ಬರತೊಡಗಿತು. ಪಾಪ, ಅವನಾದರೂ ಏನು ಮಾಡಬಹುದಿತ್ತು!
ಮುಗಿಲಿನಲ್ಲಿ ಚಿಕ್ಕೆಗಳು ಮಿನುಗುತ್ತಿದ್ದವು.

ಮರುದಿನ ಮುಂಜಾನೆ ಸಿಲ್ವೆಸ್ಟರನ ತಾಯಿ-ತಂದೆ ನೆರೆಹೊರೆಯಲ್ಲಿ ತಮ್ಮ ಮಗನ ಬಗ್ಗೆ ವಿಚಾರಣೆ ಮಾಡತೊಡಗಿದರು.

ಉಳಿದ ಮರಿಗಳ ಮತ್ತು ಕುನ್ನಿಗಳ ಹತ್ತಿರ ಹೋಗಿ
ಕೇಳತೊಡಗಿದರು. ಆದರೆ ಯಾರೂ ಸಿಲ್ವೆಸ್ಟರನನ್ನು ನೋಡಿರಲಿಲ್ಲ.

ತಂದೆ-ತಾಯಿ ಪೋಲೀಸರ ಹತ್ತಿರ ಹೋಗಿ ದೂರು ಕೊಟ್ಟರು.
ಅವರಿಗೂ ಮಗು ದೊರೆಯಲಿಲ್ಲ.



ಊರಲ್ಲಿಯ ಎಲ್ಲ ನಾಯಿಗಳು ಒಂದುಗೂಡಿದವು. ಮತ್ತು ಸಿಲ್ವೆಸ್ಟರನನ್ನು ಹುಡುಕಲು ಹೊರಬಿದ್ದವು. ಎಲ್ಲ ಕಲ್ಲುಗಳ ಕೆಳಗೆ ವಾಸನೆ ತಗೊಳ್ಳುತ್ತಿದ್ದವು. ಗಿಡಗಂಟಿಗಳ ಬೇರುಗಳಲ್ಲಿ, ಹುಲ್ಲುಗಳಲ್ಲಿ, ಗುಡ್ಡದ ಮೂಲೆಮೂಲೆಗಳಲ್ಲಿ ಅವನನ್ನು ಹುಡುಕುತ್ತಿದ್ದವು.



ಆದರೆ ಎಲ್ಲಿಯೂ ಸಿಲ್ವೆಸ್ಟರ ದೊರೆಯಲಿಲ್ಲ. ಕಲ್ಲಿಗೆ ಕಲ್ಲಿನ
ವಾಸನೆ ಹಾಗು ಹುಲ್ಲಿಗೆ ಹುಲ್ಲಿನ ವಾಸನೆ ಬರುತ್ತಿತ್ತು.
ಸಿಲ್ವೆಸ್ಟರನ ವಾಸನೆ ಬರಲೇ ಇಲ್ಲ.

ಒಂದು ತಿಂಗಳ ಮೇಲಾಯಿತು. ಅವನ ತಂದೆ-ತಾಯಿ ಹುಡುಕುತ್ತಲೇ ಇದ್ದರು. ನೆರೆಹೊರೆಯವರನ್ನು ಕೇಳುತ್ತಿದ್ದರು. ಇಬ್ಬರು ಸಾಕಷ್ಟು ದಣಿದಿದ್ದರು. ಏನು ಮಾಡಬೇಕು ಎಂಬುದೇ ತಿಳಿಯುತ್ತಿರಲಿಲ್ಲ. *ಏನಾದರೂ ದುರಂತವಾಗಿರಬಹುದು. ಇನ್ನು ಮುಂದೆ ಅವನನ್ನು ನಾವು ನೋಡಲಾರೆವು* ಎಂಬ ವಿಚಾರಗಳು ಬರತೊಡಗಿದವು. (ನಿಜವಾಗಿ ನೋಡಿದರೆ ಆತ ಒಂದು ಮೈಲಿನಷ್ಟೆ ದೂರವಿದ್ದನು.)

ನೆಮ್ಮದಿಯಿಂದ ಜೀವಿಸಬೇಕೆಂದು
ಪ್ರಯತ್ನಿಸತೊಡಗಿದರು. ದಿನಗೆಲಸದಲ್ಲಿ ನಿರತರಾದರು.
ಆದರೆ ಮನೆಯಲ್ಲಿಯ ಪ್ರತಿಯೊಂದು ವಸ್ತುಗಳು ಮಗನ
ನೆನಪನ್ನು ಕೊಡುತ್ತಿದ್ದವು. ಕೆಲಸದಲ್ಲಿ ನೆಮ್ಮದಿ ಇರಲಿಲ್ಲ.

ರಾತ್ರಿಯಾದ ಮೇಲೆ ದಿನ ಹಾಗು ದಿನವಾದ ಮೇಲೆ ರಾತ್ರಿ ಹೀಗೆ ಚಕ್ರವು ತಿರುಗುತ್ತಿತ್ತು. ಸಿಲ್ವೆಸ್ಟರನಿಗೆ ನಡುನಡುವೆ ಎಚ್ಚರವಾಗುತ್ತಿತ್ತು.ಎಚ್ಚರಿದ್ದಾಗ ಬಹಳ ಕೆಡುಕೆನ್ನಿಸುತ್ತಿತ್ತು. ಹತಾಶನಾಗುತ್ತಿದ್ದನು.

ಇನ್ನು ಮುಂದೆ ನಾನು ಕಲ್ಲಾಗಿಯೇ ಬೀವಿಸಬೇಕು ಎಂಬ ವಿಚಾರವು ಅವನನ್ನು ಕಾಡತೊಡಗಿತು. ಅವನು ನಿಜವಾಗಿ ಕಲ್ಲಾದನು. ಯಾವಾಗಲೂ ನಿದ್ದೆಯಲ್ಲಿ ಇರುತ್ತಿದ್ದನು. ಬೇಸಿಗೆ ಬಂತು. ಎಲೆಗಳು ಉದುರತೊಡಗಿದವು. ಹುಲ್ಲು ಒಣಗಿದವು.

ಚಳಿಗಾಲ ಬಂತು. ಗಾಳಿ ಬೀಸತೊಡಗಿತು. ಹಿಮ
ಬೀಳತೊಡಗಿತು. ಎಲ್ಲ ಪ್ರಾಣಿ – ಪಕ್ಷಿಗಳು ತಮ್ಮ ಗೂಡಿನಲ್ಲಿ
ಇರತೊಡಗಿದವು. ಕೂಡಿಸಿಟ್ಟ ಅನ್ನದ ಮೇಲೆ
ಜೀವಿಸತೊಡಗಿದವು.

ಒಮ್ಮೆ ಬಂಡೆಗಲ್ಲಿನ ಮೇಲೆ ನರಿ ಬಂದು ಕುಳಿತಿತು.
ಸಿಲ್ವೆಸ್ಟರ *ಹಸಿವೆಯಾಗಿದೆ* ಎಂದು ಕೂಗಿದನು.
ಏನೂ ಪ್ರಯೋಜನವಾಗಲಿಲ್ಲ.



ಹಿಮ ಕರಗತೊಡಗಿತು. ಸೂರ್ಯ ಕಾಣತೊಡಗಿದನು.
ನೆಲ ಕಾಯತೊಡಗಿತು.



ಗಿಡಗಳಲ್ಲಿ ಎಲೆಗಳು ಚಿಗಿಯತೊಡಗಿದವು.
ಹೂವುಗಳು ಅರಳತೊಡಗಿದವು.

ಮೇ ತಿಂಗಳ ಒಂದು ದಿನ ಸಿಲ್ವೆಸ್ಟರನ ತಂದೆ *ನಾವು ಪಿಕನಿಕಕ್ಕೆ ಹೋಗುವ* ಎಂದು ಹೆಂಡತಿಗೆ ಹೇಳಿದರು. *ಬಹಳ ದಿನಗಳಾದವು. ಸಿಲ್ವೆಸ್ಟರ ಇಲ್ಲದೆ ದಿನ ಕಳೆಯುವದು ಸಾಧ್ಯವಿಲ್ಲ. ಆದರೂ ಸ್ವಲ್ಪ ನೆಮ್ಮದಿಯಾದರೂ ಬರಬಹುದು,* ಎಂದು ಅವರು ಯೋಚಿಸಿದರು. ಅವರಿಬ್ಬರು ಸ್ಕ್ಯಾಬೆರಿ ಗುಡ್ಡದ ಮೇಲೆ ಪಿಕನಿಕ್ಕಿಗಾಗಿ ಹೋದರು.

ತಾಯಿ ಆ ಬಂಡೆಗಲ್ಲಿನ ಮೇಲೆಯೆ ಕುಳಿತಳು. ತಾಯಿಯ ಮಮತೆಯ ಕಾವು ಸಿಲ್ವೆಸ್ಟರನ ಮನ ಕದಡಿತು. ಅಮ್ಮ, ನಾನಿಲ್ಲಿದ್ದೇನೆ ಎಂದು ಕೂಗುವ ಪ್ರಯತ್ನ ಮಾಡತೊಡಗಿದನು. ಆದರೆ ಬಾಯಿಯಿಂದ ಶಬ್ದಗಳು ಹೊರಬರಲಿಲ್ಲ. ಅವನು ಕಲ್ಲಾಗಿದ್ದನು.

ತಂದೆ ಗುಡ್ಡವನ್ನು ಸುತ್ತು ಹಾಕಿ ತಿರುಗಿ ಬಂದರು. ತಾಯಿ ಊಟವನ್ನು ಬಡಿಸುತ್ತಿದ್ದಳು. ಸ್ಯಂಡವಿಚ್, ಓಟ್ಸದ ಉಪ್ಪಿನಕಾಯಿ, ಸ್ಯಾಲಡ್ ಮುಂತಾದ ತಿಂಡಿಗಳಿದ್ದವು. ಅಷ್ಟರಲ್ಲಿ ತಂದೆಗೆ ಆ ಹೊಳೆಯುತ್ತಿರುವ ಕೆಂಪು ಹರಳು *ಕಂಡಿತು.ಎಂತಹ ಚೆಂದದ ಹರಳಿದು* ! ಎಂದು ಅಚ್ಚರಿಪಟ್ಟರು. ಸಿಲ್ವೆಸ್ಟರನ ಸಂಪತ್ತಿನಲ್ಲಿ ಇದು ಚೆಂದವಾಗಿ ಕಾಣುತ್ತಿತ್ತು. ಎಂದೆನ್ನುತ್ತ ಆ ಹೊಳೆಯುವ ಹರಳನ್ನು ಬಂಡೆಗಲ್ಲಿನ ಮೇಲಿಟ್ಟರು.

ಕಲ್ಲಿನ ಮೇಲೆ ಊಟ ಬಡಿಸಿ ತಿನ್ನತೊಡಗಿದರು.ಕಲ್ಲು ಎಷ್ಟು ಎಚ್ಚರವಾಗಬಹುದೋ ಅಷ್ಟು ಸಿಲ್ವೆಸ್ಟರ ಎಚ್ಚರಾದನು. ನಾನಿನ್ನು ಸತ್ತಿಲ್ಲ ಎಂದು ಅವನಿಗೆ ಅನ್ನಿಸಿತು. ನಾನು ನಿಮ್ಮಿಂದ ದೂರವಿಲ್ಲ. *ನಾನು ಇಲ್ಲಿಯೇ ಇದ್ದೇನೆ.* ಎಂದು ಅವನಿಗೆ ಹೇಳಬೇಕಾಗಿತ್ತು ಆದರೆ ಬಾಯಿಯಿಂದ ಧ್ವನಿ ಹೊರಬರಲಿಲ್ಲ. ಅವನ ಯಕ್ಷಿಣಿ ಹರಳು ಅವನ ಮೈಮೇಲಿದ್ದದ್ದು ಅವನಿಗೆ ತಿಳಿದಿರಲಿಲ್ಲ.

ಈ ಹೊತ್ತಿನಲ್ಲಿ ಸಿಲ್ವೆಸ್ಟರ ನಮ್ಮ ಜತೆ ಬೇಕಾಗಿತ್ತು. ತಾಯಿ ಹಂಬಲಿಸಿದಳು. ತಂದೆ ನೊಂದಿಕೊಂಡು ನೆಲ ನೋಡತೊಡಗಿದರು. *ನಿಮಗೂ ಹೀಗೆ ಅನ್ನಿಸುತ್ತಿರಬಹುದಲ್ಲವೆ? ಇದೆಂತಹ ಹುಚ್ಚು ಪ್ರಶ್ನೆ?* ತಂದೆ ಕೇಳಿದರು. ಇಬ್ಬರು ನೊಂದಿಕೊಂಡು ನೋಡತೊಡಗಿದರು. ನಾನು ಮೊದಲಿನ ಹಾಗೆ ಆದರೆ, ನಾನು ಮೊದಲಿನ ಹಾಗೆ ಆದರೆ, ಸಿಲ್ವೆಸ್ಟರ ತನ್ನಷ್ಟಕ್ಕೆ ತಾನೇ ಅನ್ನತೊಡಗಿದನು. ಮುಂದಿನ ಕ್ಷಣದಲ್ಲಿಯೇ ಅವನು ಮೊದಲಿನಂತೆ ಮಗುವಾಗಿ ಆ ಕಲ್ಲಿನಿಂದ ಹೊರಬಿದ್ದನು.

ಅವರೆಲ್ಲರಿಗೂ ಎಷ್ಟೊಂದು ಆನಂದವಾಯಿತು ಎಂಬುದನ್ನು ಊಹಿಸಲು ಸಾಧ್ಯವಾಗಲಿಕ್ಕಿಲ್ಲ. ಒಬ್ಬರಿಗೊಬ್ಬರು ಅಪ್ಪಿಕೊಂಡರು, ಮುದ್ದು ತೆಗೆದುಕೊಂಡರು. ಎಲ್ಲರಿಗೂ ಅಚ್ಚರಿಯಾಗಿತ್ತು.

ಕೆಲ ವೇಳೆನಂತರ ಎಲ್ಲರು ಶಾಂತರಾದರು. ಮನೆಗೆ ಮರಳಿ ಬಂದರು. ಆ ಮೋಡಿಯ ಹರಳನ್ನು ಸುರಕ್ಷಿತವಾಗಿ ಒಂದು ಕಪಾಟಿನಲ್ಲಿ ಭದ್ರವಾಗಿ ಇಟ್ಟುಬಿಟ್ಟರು. *ಮುಂದೆ ಎಂದಾದರೂ ಬೇಕಾದಾಗ ಅದನ್ನು ಉಪಯೋಗುಸುವ. ನಮ್ಮ ಮನಸ್ಸಿನಲ್ಲಿ ಈಗ ಯಾವ ಆಶೆಗಳಿಲ್ಲ. ನಮಗೆ ಏನೇನು ಬೇಕು ಅದೆಲ್ಲ ನಮಗೆ ದೊರೆತಿದೆ.*